ಕಡೆ ಮುಸ್ಲಿಂ ಸಾಹಿತಿಗಳ ಪ್ರಾತಿನಿಧ್ಯವೊಂದೇ ಕಾರಣಕ್ಕೆ ಕಾರ್ಯಕ್ರಮಗಳಿಗೆ ಕರೆದಾಗಲೋ ಮತ್ತೆ ಮತ್ತೆ ಅನಿಸುತ್ತದೆ ನಾವು ಕನ್ನಡದ ಬರಹಗಾರರು. ಕನ್ನಡ ಲೋಕದಲ್ಲಿ ಕನ್ನಡವೊಂದೇ ನಮ್ಮ ಪೊರೆಯುವ ಮಮತೆ ಎಂದು ಇವರಿಗೆ ಅರ್ಥ ಮಾಡಿಸುವುದು ಹೇಗೆ ಎಂದು ಗೊಂದಲಗೊಂಡಿದ್ದೇನೆ!

ಒಮ್ಮೆ ಹೀಗಾಯಿತು. ಸ್ನೇಹಿತರೆ ನಡೆಸುವ ಸಮುದಾಯ ಬೆಂಬಲ ಗುಂಪುಗಳ ಆನ್ ಲೈನ್ ಮೀಟಂಗು ನಡೆಯುತ್ತಿತ್ತು. ಅಲ್ಲಿ ಹೆಣ್ಣಿಂದ ಗಂಡಾಗುವ ಸರ್ಜರಿ ಹಂತಗಳನ್ನು ಹಾದು ಹೋಗುತ್ತಿದ್ದ ಸುಮಾರು ಇಪ್ಪತ್ತೆರಡು ವರ್ಷ ಪ್ರಾಯದ ಝೆನ್ Z ಕೂಸು ತುಂಬಾ ಇರುಸುಮುರುಸನ್ನು ಅನುಭವಿಸುತ್ತಿತ್ತು. ಅದಕ್ಕೆ ಕಾರಣವೂ ಇತ್ತು. ಅಲ್ಲಿ ಚರ್ಚೆಯನ್ನು ಲೀಡ್ ಮಾಡುತ್ತಿದ್ದ ಒಬ್ಬರು ಆ ಝೆನ್ ಝೆಡ್ Z ವ್ಯಕ್ತಿಯ ಹೆಸರು ಕರೆಯುವಾಗೆಲ್ಲ ಅವರಿಗೆ ಪರಿಚಯವಿದ್ದ ರೂಢಿಯಿದ್ದ ಹಳೆಯ ಡೆಡ್ ನೇಮ್ ಇಂದಲೇ ಅವರನ್ನು ಕರೆಯುತ್ತಿದ್ದರು. ಹಾಗೆ ಮಾಡುವುದು ಈಗಿನ ಹೊಸಕಾಲದಲ್ಲಿ ಲಿಂಗತ್ವ ಅಸೂಕ್ಷ್ಮ ವಿಷಯವೆಂದು ಅವರಿಗೆ ಹೊಳೆಯಲಿಲ್ಲವೋ ಅಥವಾ ರೂಢಿಯಿಂದ ಆಚೆ ಬರುವುದು ಅದೆಷ್ಟು ಕಷ್ಟವೋ ನಾನು ಕಾಣೆ; ಕಡೆಗೆ ಆ ಝೆನ್ Z ವ್ಯಕ್ತಿ ಆ ಆನ್ ಲೈನ್ ಮೀಟಂಗಿನ ಸಂಚಾಲಕರಿಗೆ, ಸ್ಪಷ್ಟವಾಗಿ ದಿಟ್ಟವಾಗಿ ‘ನೀವು ಮತ್ತೆ ಮತ್ತೆ ನನ್ನ ಡೆಡ್ ನೇಮನ್ನು ಕರೆಯುತ್ತಿದ್ದೀರಿ. ನನಗೆ ಈ ಜಾಗ ಟ್ರಿಗರಿಂಗ್ ಆಗಿದೆ. ಐ ಯಾಮ್ ನಾಟ್ ಕಂಫರ್ಟಬಲ್ ಹಿಯರ್’ ಎಂದು ಆ ಮೀಟಂಗನ್ನೇ ಬಿಟ್ಟು ಹೋದರು. ಈಗಂತೂ ಕಾರ್ಪೊರೇಟ್ ಜಾಗದ ಆನ್ ಲೈನ್ ಮೀಟಂಗುಗಳಲ್ಲಿ, ನಮ್ಮ ಸಾಮಾಜಿಕ ಜಾಲತಾಣಗಳಲ್ಲಿ ಪ್ರೊಫೈಲ್ ಹೆಸರಿನ ಪಕ್ಕ ಜನ ತಮ್ಮನ್ನು ಯಾವ ಲಿಂಗತ್ವದಿಂದ ಗುರುತಿಸಬೇಕು ಎಂದು ಬರೆದುಕೊಂಡಿರುತ್ತಾರೆ. ಉದಾಹರಣೆಗೆ ಕಿರಣ್(they/them), ಅಹಾನಾ(he/him), ಸಂಜಯ್(she/they) ಇತ್ಯಾದಿ. ಬ್ರಾಕೆಟ್ಟಿನಲ್ಲಿರುವ ಸರ್ವನಾಮವು ಜನಗಳನ್ನು ಅವಳು ಎಂದೋ ಅವನು ಎಂದೋ, ಅವರು ಎಂದೋ ಉಚ್ಚರಿಸಲು ಸಹಕರಿಸುತ್ತದೆ. ಮುಖತಃ ಭೇಟಿಯಾದಾಗಲೂ ಈಗ ಜನರನ್ನು ನೇರವಾಗಿಯೇ ‘ನಿಮ್ಮ ಪ್ರೊನೌನ್ಸ್ ಏನೆಂದು ಹೇಳಬಹುದಾ?’ ಎಂದು ಕೇಳಿ ನಂತರವೇ ಮುಂದಿನ ಮಾತುಕತೆಯನ್ನು ಮುಂದುವರೆಸುತ್ತಾರೆ. ಇದು ಅವರ ಲಿಂಗತ್ವದ ಅಸ್ಮಿತೆಗೆ ಕೊಡುವ ಗೌರವವೂ ಹಾಗೂ ಇಂದಿನ ಯುಗಧರ್ಮದ ಸಂವಹನ ಘಟಿಸುವ ಹೊಸ ಘನತೆಯ ರೀತಿಯೂ ಆಗಿದೆ. ಕೇವಲ ಹೆಣ್ಣು ಗಂಡು ಎಂಬ ಬೈನರಿ ದೃಷ್ಟಿಯಲ್ಲಿಯೇ ನೋಡುವ ಜನರಿಗೆ ಸಹಾಯ ಮಾಡುವ ದಾರಿಯಾಗಿಯೂ, ಪ್ರತಿರೋಧವಾಗಿಯೂ ನನಗೆ ಕಾಣುತ್ತದೆ.

ಒಮ್ಮೆ ಕನ್ನಡದ ಕವಿಯೊಬ್ಬರು ನಾನು ಕ್ವಿಅರ್ ಸಂವೇದನೆಯ ವಿಷಯಗಳನ್ನ ನನ್ನ ಬರಹದಲ್ಲಿ ತರುವುದರಿಂದಲೋ ಏನೋ ‘ಈ LGBTQIA + ಅಸ್ಮಿತೆಗಳ ಕುರಿತಾಗಿ ವಿವರವಾಗಿ ಹೇಳಬಹುದಾ ಎಂದು ಕೇಳಿಕೊಂಡರು. ನಾನು ನನಗೆ ಆ ಹೊತ್ತಿಗೆ ತಿಳಿದಿದ್ದಷ್ಟು ಮತ್ತು ಆ ಒಂದೊಂದು ಅಕ್ಷರ ಯಾವ್ಯಾವ ಲಿಂಗತ್ವ ಅಸ್ಮಿತೆಯ ಹೃಸ್ವ ರೂಪ ಎಂದು ಹೇಳುತ್ತ ಹೋದೆ.’ ಅದನ್ನ ಕೇಳಿಸಿಕೊಂಡ ಕೋಣೆಯಲ್ಲಿದ್ದ ಮತ್ತೊಬ್ಬ ಕವಿ ‘ಅಲ್ಲಾ, ಎಲ್ಲಾದಕ್ಕೂ ಒಂದೊಂದು ಅಸ್ಮಿತೆ ಅಂತಾದರೆ ಮುಂದೇನು ಗತಿ?’ ಎಂದು ಆಶ್ಚರ್ಯ ವ್ಯಕ್ತ ಪಡಿಸಿದ್ದರು. ಆ ಕೋಣೆಯಲ್ಲಿದ್ದ ಉಳಿದ ಕವಿಗಳು ಯಾರ ಪರವಾಗಿ ಎಲ್ಲಿ ನಿಲ್ಲುವುದು ಎನ್ನುವ ಅನಾದಿ ಪ್ರಶ್ನೆಗೆ ಗೊಂದಲಗೊಂಡು ತಬ್ಬಿಬ್ಬಾಗಿ ನಿಂತಿದ್ದರು. ಆ ಹೊತ್ತಲ್ಲಿ ಅವರನ್ನು ಎದುರು ಹಾಕಿಕೊಳ್ಳುವ ಅಥವಾ ಮೆಲುದನಿಯಲ್ಲಿ ವಾಪಸು ಉತ್ತರ ಹೇಳುವ ಛಾತಿಯೂ ನನ್ನಲ್ಲಿರಲಿಲ್ಲ. ನನಗೆ ಅವರ ಮಾತಲ್ಲಿ ವ್ಯಂಗ್ಯವೂ ಅಸಡ್ಡೆಯು ಸುಪ್ತಭಯವು ಇತ್ತೆಂದು ಬಲವಾಗಿ ಅನಿಸುತ್ತಿತ್ತು. ಆ ಪ್ರಶ್ನೆ, ಅವರು ಹೇಳಿದ ರೀತಿ ನನಗೆ ಬಲವಾಗಿ ಕಾಡಿತ್ತು. ಇತ್ತೀಚಿಗೆ ಅಮೆರಿಕದ ಡೊನಾಲ್ಡ್ ಟ್ರಂಪ್ ತಮ್ಮ ಭಾಷಣದಲ್ಲಿ ಈ ಜಗತ್ತಿನಲ್ಲಿ ಇರುವುದು ಎರಡೇ- ಒಂದು ಗಂಡು, ಮತ್ತೊಂದು ಹೆಣ್ಣು ಉಳಿದವೆಲ್ಲ ಇಲ್ಲ ಎಂಬ ಆಘಾತಕಾರಿ ಹೇಳಿಕೆಯನ್ನು ಕೊಟ್ಟರು. ಅದು ಅಲ್ಲಿನ ಮತ್ತು ಜಗತ್ತಿನಾದ್ಯಂತದ ಹೋರಾಟಗಾರರ ಕೋಪಕ್ಕೆ ಗುರಿ ಕೂಡ ಆಯಿತು. ರೂಪ, ರೂಪಾಂತರ ಹಾಗೂ ಹೆಸರುಗಳು ಹೇಗೆ ಕಾಲಕಾಲಕ್ಕೆ ಹೊಸರೀತಿಯಲ್ಲಿ ಆವಿರ್ಭವಿಸುತ್ತವೆ. ಅದನ್ನು

